**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಬಸನಗೌಡ ಬಾದರ್ಲಿ ಇವರು ನಿಯಮ-72 ರಡಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ.**

**ವಿಷಯ:**

"ಇಡೀ ಕಲ್ಯಾಣ ಕರ್ನಾಟಕ ಭಾಗದಲ್ಲೇ ಅತೀ ಹೆಚ್ಚು ಶಿಕ್ಷಣ ಸಂಸ್ಥೆಗಳನ್ನು ಹೊಂದಿರುವ ಸಿಂಧನೂರು ತಾಲ್ಲೂಕು ಶೈಕ್ಷಣಿಕವಾಗಿ ಮುಂದುವರೆಯುತ್ತಿದ್ದು, ರಾಯಚೂರು ಜಿಲ್ಲಾ ಕೇಂದ್ರದಿಂದ ಸುಮಾರು 91 ಕಿ.ಮೀ ದೂರದಲ್ಲಿದೆ. ಇಲ್ಲಿನ ಶಾಲಾ-ಕಾಲೇಜುಗಳ ಸಂಖ್ಯೆ, ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಹಾಗೂ ಭೌಗೋಳಿಕ ವ್ಯಾಪ್ತಿಯನ್ನು ಪರಿಗಣಿಸಿ, ಸಿಂಧನೂರು ತಾಲ್ಲೂಕನ್ನು 'ನೂತನ ಶೈಕ್ಷಣಿಕ ಜಿಲ್ಲೆ' ಎಂದು ಘೋಷಿಸುವ ಸಂಬಂಧ ಮಾನ್ಯ ಶಾಲಾ ಶಿಕ್ಷಣ & ಸಾಕ್ಷರತಾ ಸಚಿವರ ಗಮನ ಸೆಳೆಯಬಯಸುತ್ತೇನೆ".

**ಉತ್ತರ:**

ರಾಯಚೂರು ಜಿಲ್ಲೆಯಲ್ಲಿ ಈಗಾಗಲೇ ಉಪನಿರ್ದೇಶಕರ ಕಚೇರಿ (ಆಡಳಿತ) ಮತ್ತು ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, (ಡಯಟ್) ಗಳು ಕಾರ್ಯನಿರ್ವಹಿಸುತ್ತಿರುತ್ತವೆ.

ರಾಯಚೂರು ಜಿಲ್ಲೆಯಲ್ಲಿ 05 ತಾಲ್ಲೂಕುಗಳಿದ್ದು (ರಾಯಚೂರು, ಮಾನ್ವಿ, ದೇವದುರ್ಗ, ಲಿಂಗಸೂರು ಮತ್ತು ಸಿಂಧನೂರು) ಜಿಲ್ಲಾ ಕೇಂದ್ರದಿಂದ ತಾಲ್ಲೂಕುಗಳಿಗೆ ಇರುವ ಅಂತರ ಗರಿಷ್ಟ 90 ಕಿ.ಮೀಗಳಾಗಿರುತ್ತದೆ. ಜಿಲ್ಲೆಯ ಶಾಲೆಗಳ ವಿವರ ಈ ಕೆಳಗಿನಂತಿರುತ್ತದೆ.

| ಕ್ರ. ಸಂ. | ತಾಲ್ಲೂಕಿನ ಹೆಸರು | ಶಾಲೆಗಳ ವಿವರ | | | |
|---|---|---|---|---|---|
| | | ಸರ್ಕಾರಿ | ಅನುದಾನಿತ | ಅನುದಾನ ರಹಿತ | ಒಟ್ಟು |
| 1 | ರಾಯಚೂರು | 314 | 30 | 116 | 460 |
| 2 | ದೇವದುರ್ಗ | 351 | 4 | 87 | 442 |
| 3 | ಮಾನ್ವಿ | 317 | 13 | 156 | 486 |
| 4 | ಲಿಂಗಸುಗೂರು | 364 | 21 | 147 | 532 |
| 5 | ಸಿಂಧನೂರು | 338 | 31 | 185 | 554 |

ಈ ಹಿಂದೆ ತುಮಕೂರು, ಬೆಳಗಾವಿ, ಉತ್ತರ ಕನ್ನಡ, ಬೆಂಗಳೂರು ನಗರ ಜಿಲ್ಲೆಗಳಲ್ಲಿ ಭೌಗೋಳಿಕ ವಿಸ್ತೀರ್ಣ ಮತ್ತು ತಾಲ್ಲೂಕುಗಳ ಸಂಖ್ಯೆ ಹಾಗೂ ಆಡಳಿತ ವ್ಯಾಪ್ತಿಯನ್ನು ಆಧರಿಸಿ ಶೈಕ್ಷಣಿಕ ಜಿಲ್ಲೆಗಳನ್ನು ಸೃಜಿಸಲಾಗಿರುತ್ತದೆ.

<u>**ವಿವರ:**</u>

| ಜಿಲ್ಲೆಯ ಹೆಸರು | ಒಟ್ಟು ತಾಲ್ಲೂಕುಗಳ ಸಂಖೆ | ಮೂಲ ಜಿಲ್ಲೆಯ ತಾಲ್ಲೂಕುಗಳು | ಶೈಕ್ಷಣಿಕ ಜಿಲ್ಲೆಯ ತಾಲ್ಲೂಕುಗಳು |
|---|---|---|---|
| ತುಮಕೂರು | 10 | 06 (ತುಮಕೂರು) | 04 (ಮಧುಗಿರಿ) |
| ಬೆಳಗಾವಿ | 15 | 07 (ಬೆಳಗಾವಿ) | 08 (ಚಿಕ್ಕೋಡಿ) |
| ಉತ್ತರ ಕನ್ನಡ | 11 | 05 (ಕುಮಟಾ) | 06 (ಶಿರಸಿ) |
| ಬೆಂಗಳೂರು ನಗರ | 09 | 05 (ದಕ್ಷಿಣ) | 04 (ಉತ್ತರ) |

ಆದರೆ, ರಾಯಚೂರು ಜಿಲ್ಲೆಯ ವಸ್ತುಸ್ಥಿತಿ ಈ ಕೆಳಕಂಡಂತಿರುತ್ತದೆ:

1. ರಾಯಚೂರು ಜಿಲ್ಲೆಯಲ್ಲಿ 05 ತಾಲ್ಲೂಕುಗಳು ಮಾತ್ರ ಇರುವುದರಿಂದ ಶೈಕ್ಷಣಿಕ ವ್ಯಾಪ್ತಿಯನ್ನು ವಿಂಗಡಿಸುವ ಅವಶ್ಯಕತೆ ಕಂಡು ಬರುವುದಿಲ್ಲ.
2. ಶೈಕ್ಷಣಿಕ ಜಿಲ್ಲೆಯನ್ನು ಸಿಂಧನೂರಿನಲ್ಲಿ ಪ್ರಾರಭಿಸಿದಲ್ಲಿ ಆಡಳಿತಾತ್ಮಕವಾಗಿ ಸಂಬಂಧಿಸಿದ ಕಛೇರಿ ಹಾಗೂ ಹುದ್ದೆಗಳನ್ನು ಸೃಜಿಸ ಬೇಕಿರುತ್ತದೆ. ಇದರಿಂದ ಸರ್ಕಾರಕ್ಕೆ ಆರ್ಥಿಕ ಹೊರೆಯಾಗುವ ಸಂಭವವಿರುತ್ತದೆ.
3. ಜಿಲ್ಲಾ ಕೇಂದ್ರದಿಂದ ತಾಲ್ಲೂಕುಗಳಿಗೆ ಇರುವ ಅಂತರ ಗರಿಷ್ಟ 90 ಕಿ.ಮೀಗಳಿದ್ದು ಈ ಕಾರಣದಿಂದ ಶೈಕ್ಷಣಿಕ ವಿಂಗಡನೆ ಸೂಕ್ತವಾಗಿರುವುದಿಲ್ಲ.
4. ಭೌಗೋಳಿಕ ವ್ಯಾಪ್ತಿಯು ಕೇವಲ 90 ಕಿ.ಮೀ ಗಳಾಗಿರುವುದರಿಂದ 05 ತಾಲ್ಲೂಕುಗಳ ನಡುವಿನ ಸಂಪರ್ಕ ಸಾಧನೆ ಹಾಗೂ ಆಡಳಿತ ವ್ಯಾಪ್ತಿಯು ಸುಗಮವಾಗಿರುತ್ತದೆ.
5. ಈ ಹಿಂದೆ ಸಮಗ್ರ ಜಿಲ್ಲೆಯಾಗಿದ್ದ ರಾಯಚೂರು ಜಿಲ್ಲೆಯನ್ನು ಆಡಳಿತಾತ್ಮಕವಾಗಿ ವಿಭಜಿಸಿ ರಾಯಚೂರು ಮತ್ತು ಕೊಪ್ಪಳ ಜಿಲ್ಲೆಗಳನ್ನಾಗಿ ವಿಭಜಿಸಲಾಗಿದೆ. ವಿಭಜಿಸಿದ ನಂತರ ರಾಯಚೂರು ಜಿಲ್ಲೆಯಲ್ಲಿ 05 ತಾಲ್ಲೂಕುಗಳಿದ್ದು ಆಡಳಿತಾತ್ಮಕ ಮತ್ತು ಶೈಕ್ಷಣಿಕವಾಗಿ ಕಾರ್ಯನಿರ್ವಹಿಸಲು ಅನುಕೂಲಕರವಾಗಿರುತ್ತದೆ.

6. ಇಲಾಖೆಗಳ ಸೇವೆಗಳು ಈಗ ಗಣಕೀಕೃತಗೊಳ್ಳುತ್ತಿರುವುದರಿಂದ, ಇಲಾಖೆಯ ಎಲ್ಲಾ ಮಾಹಿತಿಯು Online ನಲ್ಲಿ ಅಧಿಕಾರಿಗಳಿಗೆ ಲಭ್ಯವಿರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನೆ ಯಲ್ಲಿ, ಜಿಲ್ಲಾ ಕೇಂದ್ರ ರಾಯಚೂರಿನಿಂದ ಎಲ್ಲಾ ತಾಲ್ಲೂಕುಗಳು ಸೇರಿದಂತೆ ಸಿಂಧನೂರಿಗೆ ಸಾರಿಗೆ ಸಂಪರ್ಕ ಉತ್ತಮವಾಗಿದ್ದು, ಸಿಂಧನೂರನ್ನು ಹೊಸ ಶೈಕ್ಷಣಿಕ ಜಿಲ್ಲೆಯನ್ನಾಗಿ ಘೋಷಿಸುವ ಅವಶ್ಯಕತೆ ಕಂಡು ಬರುವುದಿಲ್ಲ.

**(ಎಸ್. ಮಧು ಬಂಗಾರಪ್ಪ)**
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು.

ಸಂಖ್ಯೆ:ಇಪಿ 43 ಡಿಎಲ್ಆರ್ 2026